ಇ) ಹೌದು.

ಈ) ಸಾರ್ವಜನಿಕರಿಗೆ ತೊಂದರೆಯಾದ ಹಿನ್ನೆಲೆಯಲ್ಲಿ ದಿನಾಂಕ: 31.12.2014 ರಿಂದ ರೆವಿನ್ಯೂ ಸ್ಟ್ಯಾಂಪ್‌ಗಳನ್ನು ಪುನರ್‌ಬಳಸಲು ಆದೇಶಿಸಲಾಗಿದೆ.

ಉ) ಅಂದಾಜು ವಾರ್ಷಿಕ 10 ಕೋಟಿ ರೂ. ಗಳ ಆದಾಯವನ್ನು ನಿರೀಕ್ಷಿಸಲಾಗಿದೆ.

ಊ) ಸಾರ್ವಜನಿಕರಿಗೆ ಮುಕ್ತವಾಗಿ ರೆವಿನ್ಯೂ ಸ್ಟ್ಯಾಂಪ್‌ಗಳು ಲಭ್ಯವಾಗಲು ಹಿಂದಿನಂತೆ ಅಂಚೆ ಕಛೇರಿಗಳಲ್ಲಿ ಮರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಕಾರ್ಮಿಕರ ಕಲ್ಯಾಣ ಯೋಜನೆಗಳು

911 (367); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರಿನಲ್ಲಿ ಇಲ್ಲಿಯವರೆಗೆ ಎಷ್ಟು ಆಟೋರಿಕ್ಷಾ ಚಾಲಕರಿಗೆ ಯಾವ ಯಾವ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಲಾಗಿದೆ;

ಆ) ಈ ಯೋಜನೆಗಳ ಬಗ್ಗೆ ಆಟೋ ಚಾಲಕರಿಗೆ ಅರಿವು ಮೂಡಿಸಲು ಕೈಗೊಂಡ ಕ್ರಮಗಳೇನು;

ಇ) ಆಟೋ ಚಾಲಕರಿಗೆ ಕಡಿಮೆ ದರದಲ್ಲಿ ಅಕ್ಕಿ ಮತ್ತು ಗೋಧಿ ವಿತರಿಸುವ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಆಟೋ ಚಾಲಕರಿಗೆ ಕಡಿಮೆ ದರದಲ್ಲಿ ಪಡಿತರ ಸೌಲಭ್ಯ ಕಲ್ಪಿಸಲಾಗುವುದೇ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯಡಿ ಈವರೆಗೆ ಬೆಂಗಳೂರಿನಲ್ಲಿ 31,768 ಆಟೋರಿಕ್ಷಾ ಚಾಲಕರು ಚಾಲಕರು ನೋಂದಣಿಯಾಗಿರುತ್ತಾರೆ.

ಈ ಯೋಜನೆಯನ್ವಯ ನೋಂದಾಯಿತ ಚಾಲಕರು (ಕರ್ತವ್ಯದಲ್ಲಿರುವಾಗ ಅಥವಾ ಕರ್ತವ್ಯದಲ್ಲಿಲ್ಲದಿರುವಾಗ) ಅಪಘಾತಕ್ಕೀಡಾಗಿ ಮರಣ / ಶಾಶ್ವತ ದುರ್ಬಲತೆ ಹೊಂದಿದಲ್ಲಿ ₹ 2 ಲಕ್ಷ ಪರಿಹಾರ ಹಾಗೂ ತಾತ್ಕಾಲಿಕ ದುರ್ಬಲತೆ ಹೊಂದಿದಲ್ಲಿ ಆಸ್ಪತ್ರೆಯ ವೆಚ್ಚವು ಸೇರಿದಂತೆ ಗರಿಷ್ಠ ₹ 1 ಲಕ್ಷದವರೆಗೆ ವಿಮಾ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

ಅಂದರೆ, ನೋಂದಾಯಿತ ಚಾಲಕರು ಅಪಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ಒಟ್ಟು ವಿಮಾ ಮೊತ್ತದಲ್ಲಿ ಶೇಕಡ 25 ರಷ್ಟು ಅಂದರೆ ಗರಿಷ್ಠ ₹ 50,000/– ರವರೆಗೆ ಅಥವಾ ಆಸ್ಪತ್ರೆ ವೆಚ್ಚ, ಯಾವುದೂ ಕಡಿಮೆಯೋ ಆ ಮೊತ್ತ ಹಾಗೂ 15 ದಿನಗಳಿಗಿಂತ ಹೆಚ್ಚು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ಒಟ್ಟು ವಿಮಾ ಮೊತ್ತದಲ್ಲಿ ಶೇಕಡ 50 ರಷ್ಟು ಅಂದರೆ ಗರಿಷ್ಟ ₹ 1 ಲಕ್ಷದವರೆಗೆ ಪರಿಹಾರ ಅಥವಾ ನಿಜವಾಗಿ ತಗಲುವ ಆಸ್ಪತ್ರೆ ವೆಚ್ಚ, ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತ ದೊರೆಯುತ್ತದೆ. ವಿಮಾ ಕಂಪನಿಗಳಿಗೆ ಪಾವತಿ ಮಾಡಬೇಕಾದ ಪ್ರೀಮಿಯಮ್ ಮೊತ್ತವನ್ನು ಸರ್ಕಾರವೇ ಭರಿಸುತ್ತದೆ.

ಈವರೆಗೆ 87 ಮರಣ ಪ್ರಕರಣಗಳಲ್ಲಿ 1.74 ಕೋಟಿ ಮತ್ತು 2 ದುರ್ಬಲತೆ ಪ್ರಕರಣಗಳಲ್ಲಿ ₹ 1,40,000/– ಗಳನ್ನು ಪರಿಹಾರ ನೀಡಲಾಗಿದೆ. 27 ಪ್ರಕರಣಗಳಲ್ಲಿ ವೈದ್ಯಕೀಯ ವೆಚ್ಚವಾಗಿ ₹ 6,46,675/– ಗಳನ್ನು ಪರಿಹಾರವಾಗಿ ನೀಡಲಾಗಿದೆ.

ನೋಂದಾಯಿತ ಆಟೋ ರಿಕ್ಷಾ ಚಾಲಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ವಿತರಿಸಿರುವ ಬಿ.ಪಿ.ಎಲ್. ಕಾರ್ಡ್‌ಗಳನ್ನು ಹೊಂದಿದ್ದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ (ಆರ್‌ಎಸ್‌ಬಿವೈ) ಯಡಿ ಕುಟುಂಬದ ಗರಿಷ್ಠ 5 ಸದಸ್ಯರು ವಾರ್ಷಿಕ ₹ 30,000/– ಗಳವರೆಗೆ ನಿಗಧಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯಗಳನ್ನು ಪಡೆಯಬಹುದಾಗಿರುತ್ತದೆ.

- ಶಸ್ತ್ರಚಿಕಿತ್ಸೆ ಸೇರಿದಂತೆ 1,516 ಕ್ಕೂ ಹೆಚ್ಚು ಚಿಕಿತ್ಸಾ ಕ್ರಮಗಳಿಗೆ ಉಚಿತ ಚಿಕಿತ್ಸೆ.
- ಆಸ್ಪತ್ರೆಗೆ ದಾಖಲಾಗುವ ಫಲಾನುಭವಿಗೆ ಗುರುತಿಸಲಾದ ಆಸ್ಪತ್ರೆಗಳಲ್ಲಿ ಪ್ರತಿ ಚಿಕಿತ್ಸೆಗೆ ₹ 100/– ರಂತೆ (ವಾರ್ಷಿಕ ₹ 1,000/– ರಂತೆ ಮೀರದಂತೆ) ಪ್ರಯಾಣ ವೆಚ್ಚ ನೀಡಲಾಗುವುದು.
- ಈಗಾಗಲೇ ಅಸ್ತಿತ್ವದಲ್ಲಿರುವ ಎಲ್ಲಾ ಖಾಯಿಲೆಗಳು (pre-existing diseases) ಮತ್ತು ಹೆರಿಗೆ ಚಿಕಿತ್ಸೆ ವೆಚ್ಚ ಹಾಗೂ ವಿಮಾ ಅವಧಿಯಲ್ಲಿ ಜನಿಸುವ ಶಿಶುಗಳಿಗೂ ಸಹ ಉಚಿತ ವಿಮಾ ಸೌಲಭ್ಯ ದೊರಕಲಿದೆ.
- ಒಂದೆ ಕುಟುಂಬದ ಸದಸ್ಯರು ಬೇರೆ ಬೇರೆ ಸ್ಥಳಗಳಲ್ಲಿ ವಾಸವಿದ್ದಲ್ಲಿ, ಅಂತಹ ಸಂದರ್ಭದಲ್ಲಿ ₹ 30,000/– ಮೀರದಂತೆ, ಹೆಚ್ಚುವರಿಯಾಗಿ ಮತ್ತೊಂದು ಕಾರ್ಡ್ (split card) ನೀಡಲು ಅವಕಾಶವಿದೆ.
- ದೇಶದಾದ್ಯಂತ ನೊಂದಾಯಿತ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಲಭ್ಯ.

ಆ) ಮುದ್ರಣ ಮಾಧ್ಯಮದ ಮೂಲಕ ಜಾಹೀರಾತು, ಕರಪತ್ರ ವಿತರಣೆ, ಪತ್ರಿಕಾ ಘೋಷ್ಠಿ ನಡೆಸಿರುವುದಲ್ಲದೆ ಆಟೋ ರಿಕ್ಷಾ ಚಾಲಕರ

ಸಂಘಟನೆಗಳ ಪ್ರತಿನಿಧಿಗಳಿಗೆ ಕಾರ್ಯಾಗಾರ ನಡೆಸಿ ಈ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ.

ಇ) ಆಟೋ ಚಾಲಕರಿಗೆ ಈ ಇಲಾಖೆಯಿಂದ ಇಂತಹ ಯೋಜನೆಗಳನ್ನು ರೂಪಿಸಿರುವುದಿಲ್ಲ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ವಿತರಿಸಿದ ಬಿ.ಪಿ.ಎಲ್. ಕಾರ್ಡ್‌ಗಳನ್ನು ಹೊಂದಿದ್ದಲ್ಲಿ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಈ) ಅನ್ವಯಿಸುವುದಿಲ್ಲ.

ಕೌಶಲ್ಯ ತರಬೇತಿ ಕಾರ್ಯಕ್ರಮ

912 (368); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) 2013–14ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯಿಂದ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಜನರಿಗೆ ಯಾವ ಯಾವ ವೃತ್ತಿಯಲ್ಲಿ ತರಬೇತಿ ನೀಡಲಾಗಿದೆ;

ಇ) ಬೆಂಗಳೂರು ನಗರದಲ್ಲಿ ಎಷ್ಟು ಜನರಿಗೆ ಈ ತರಬೇತಿ ನೀಡಲಾಗಿದೆ;

ಈ) ತರಬೇತಿ ಹೊಂದಿದವರಿಗೆ ಉದ್ಯೋಗಾವಕಾಶ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಎ) 2014–15ನೇ ಸಾಲಿನಲ್ಲಿ ಈ ಯೋಜನೆಯಡಿ ಎಷ್ಟು ಜನರಿಗೆ ಈ ತರಬೇತಿ ನೀಡಲಾಗುವುದು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಅನುಷ್ಠಾನಗೊಳಿಸಲಾಗಿದೆ.